## ಡೈಸ್ ಮಾಹಿತಿ ಸಂಗ್ರಹ ಕಾರ್ಯಕ್ಕಾಗಿ ನಡೆಸಿದ ಸಭೆ

- 2009-10 ನೇ ಸಾಲಿನ ಶೈಕ್ಷಣಿಕ ಆಂಶಗಳನ್ನು ದೆಹಲಿಯ ನ್ಯೂಪಾರವರು ನೀಡಿದ ನಮೂನೆಗಳನ್ನು ಹಾಗೂ ರಾಜ್ಯದ ಅಗತ್ಯತೆಗಾಗಿ ಸಿದ್ದಪಡಿಸಿದ ನಮೂನೆಗಳನ್ನು ಎಲ್ಲಾ ಅಧಿಕಾರಿಗಳಿಗೆ ನೀಡಿ, ಈ ಸಾಲಿನ ಶೈಕ್ಷಣಿಕ ಮಾಹಿತಿಗಳನ್ನು ಸಂಗ್ರಹಿಸಲು ಅಗತ್ಯ ಸಲಹೆ ಮಾರ್ಗದರ್ಶನ ನೀಡಲು ಕೋರಲಾಯಿತು.
- ಸಭೆಯಲ್ಲಿ ಪ್ರಮುಖವಾಗಿ ನಮೂನೆಗಳಲ್ಲಿರುವ ಎಲ್ಲಾ ಬಗೆಯ ಮಾಹಿತಿ ಪಡೆಯುವುದು ಒಳ್ಳೆಯದೆಂದು ತೀರ್ಮಾನಿಸಲಾಯಿತು. ಅದರಂತೆ ಹೆಚ್.ಸಿ.ನಾಗೇಶ್ ಪ್ರೋಗ್ರಾಮರ್ ಇ-ಆಡಳಿತ ಘಟಕ ರವರು ಪ್ರೆಸೆಂಟೇಷನ್ ನಡೆಸಿಕೊಟ್ಟರು. ಪುರುಷೋತ್ತಮ ಕುಮಾರ್ ರವರು ವಿವರಗಳನ್ನು ಒದಗಿಸಿದರು.
- ಪ್ರತಿ ವರ್ಷದಲ್ಲಿ 4 ಬಾರಿ ಮಾಹಿತಿಯನ್ನು ಪ್ರತಿ ಮೂರು ತಿಂಗಳಿಗೆ ಸಂಗ್ರಹಿಸುವ ಕಾರ್ಯದಿಂದ ಶಿಕ್ಷಕರಿಗೆ ತೊಂದರೆಯಾಗುವುದನ್ನು ತಪ್ಪಿಸುವ ದೃಷ್ಠಿಯಿಂದ ಹಾಗೂ ತ್ರೈಮಾಸಿಕ ಪರೀಕ್ಷೆಗಳು ಇಲ್ಲದ ಪ್ರಯುಕ್ತ ವರ್ಷದಲ್ಲಿ 2 ಬಾರಿ ಮಾತ್ರ ಮಾಹಿತಿಯನ್ನು ಸಂಗ್ರಹಿಸಬಹುದೆಂದು ತೀರ್ಮಾನಿಸಲಾಯಿತು.
- ಶಾಲಾ ಮಾಹಿತಿ, ಶಾಲಾ ಕಟ್ಟಡ ಮತ್ತು ಮೂಲಭೂತ ಸೌಲಭ್ಯಗಳ ವಿವರ, ಶಾಲಾ ಸಾಮನ್ಯ ಮಾಹಿತಿಗಳು ,ಶಿಕ್ಷಕರ ಮಾಹಿತಿ,ವಿದ್ಯಾರ್ಥಿಗಳ ದಾಖಲಾತಿ,ಹಾಜರಾತಿ, ವಯೋಮಾನ ಮಕ್ಕಳ ಮಾಹಿತಿ, ಪಠ್ಯ ಪುಸ್ತಕಗಳ ವಿತರಣೆಗೆ ಸಹಾಯಕವಾಗುವ ಮಾಹಿತಿ,2008-09 ನೇ ಸಾಲಿನಲ್ಲಿ ಪ್ರೋತ್ಸಾಯದಾಯಕ ಸೌಲಭ್ಯ ಪಡೆದ ವಿವರ, 3-5-7 ನೇ ತರಗತಿಯ ಫಲಿತಾಂಶ, 10ನೇ ತರಗತಿಯ ಫಲಿತಾಂಶಗಳ ಮಾಹಿತಿ ಯನ್ನು ದಿ 30-09-09 ರಲ್ಲಿದ್ದಂತೆ ಮಾಹಿತಿ ಸಂಗ್ರಹಿಸಲು ಸಭೆಯು ಅಭಿಪ್ರಾಯ ಪಟ್ಟಿತು. 20 ಪುಟಗಳ ಮಾಹಿತಿಯನ್ನು ಈ ಸಾಲಿನಲ್ಲಿ ಮಾಹಿತಿ ಸಂಗ್ರಹಿಸಲು ಸಭೆಯು ಅಭಿಪ್ರಾಯ ಪಟ್ಟಿತು.
- ದಿ 31-03-10 ರಲ್ಲಿದ್ದಂತೆ ,ವಿದ್ಯಾರ್ಥಿಗಳ ದಾಖಲಾತಿ,ಹಾಜರಾತಿ, 2009-10 ನೇ ಸಾಲಿನಲ್ಲಿ ಪ್ರೋತ್ಸಾಯದಾಯಕ ಸೌಲಭ್ಯ ಪಡೆದ ವಿವರ, 3-5-7 ನೇ ತರಗತಿಯ ಫಲಿತಾಂಶ, ಶಾಲೆಗೆ ಭೇಟಿ ನೀಡಿದ ವಿವರಗಳು , ಸಭೆಗಳು,ಶಾಲಾ ಆಸ್ತಿಯ ವಿವರಗಳ ಮಾಹಿತಿ ಸಂಗ್ರಹಿಸಲು ಸಭೆಯು ಅಭಿಪ್ರಾಯ ಪಟ್ಟಿತು.
- ಶಾಲಾ ಅನುದಾನ ಮತ್ತು ಆರ್ಥಿಕ ವಿವರ ಮತ್ತು ಆವರ್ತಕ ವೆಚ್ಚ ಮತ್ತು ಆನಾವರ್ತಕ ವೆಚ್ಚಗಳ ಮಾಹಿತಿಯನ್ನು ಪಡೆಯಲು ಶ್ರೀ ಪ್ರಭಾಕರ್ ರವರು ವಿನಂತಿಸಿದರು, ಆದರೆ ಶಾಲಾ ಮುಖ್ಯಸ್ತರಿಗೆ ಆವರ್ತಕ ಮತ್ತು ಆನಾವರ್ತಕ ವೆಚ್ಚಗಳ ಮಾಹಿತಿಯನ್ನು ಒದಗಿಸುವುದು ಸಾದ್ಯವಾಗದೇ ಇರುವುದು ಹಾಗೂ ನಿಖರವಾದ ಮಾಹಿತಿಯನ್ನು ಸಂಗ್ರಹಿಸಲು ಆಗುವುದಿಲ್ಲ ವೆಂದು ಸಭೆಯು ನಿರ್ಣಯಿಸಿ ಸದರಿ ಮಾಹಿತಿಯನ್ನು ಶಾಲಾ ಹಂತದಲ್ಲಿ ಪಡೆಯದೇ ಜಿಲ್ಲಾ ಮಟ್ಟದಲ್ಲಿ ಮಾಹಿತಿ ಸಂಗ್ರಹಿಸಲು ಸಭೆಯು ಅಭಿಪ್ರಾಯ ಪಟ್ಟಿತು.
- ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ನಿರ್ದೇಶಕರು 10 ಎ ರಲ್ಲಿ ಲೋಕ ಸಭಾ ಕ್ಷೇತ್ರದ ಮಾಹಿತಿ ಪಡೆಯಲು ಸೂಚಿಸಿದರು ಅದರಂತೆ ಸಭೆಯು ಅಭಿಪ್ರಾಯ ಪಟ್ಟಿತು.
- ಈ ಸಾಲಿನಲ್ಲಿ ಎಲ್ಲಾ ಶಾಲೆಗಳ ಮಾಹಿತಿಗಳನ್ನು ಸಂಗ್ರಹಿಸಲು ಅಗತ್ಯವಾದ ಮಾರ್ಗದರ್ಶನ ಮತ್ತು ಮಹಿತಿಯನ್ನು ಎಲ್ಲಾ ಶಾಲೆಗಳಿಗೆ ನೀಡಲು ಸಭೆಯು ಅಭಿಪ್ರಾಯ ಪಟ್ಟಿತು. ಅದರಂತೆ ಪ್ರಥಮವಾಗಿ ರಾಜ್ಯ ಮತ್ತು ಕೇಂದ್ರ ಸರ್ಕಾರದ ಸರ್ಕಾರಿ ಶಾಲೆಗಳು , ಅನುದಾನಿತ ಶಾಲೆಗಳು ಹಾಗೂ ಸರ್ಕಾರದಿಂದ ಮಾನ್ಯತೆ ಪಡೆದ ಎಲ್ಲಾ ಬಗೆಯ ಶಾಲೆಗಳೂ ಒಳಗೊಂಡಿರುವ ಎಲ್ಲಾ ಶಾಲೆಯ ಮಾಹಿತಿಗಳನ್ನು ಜಿಲ್ಲಾ ಶಾಲಾ ಡೈರಕ್ಟರಿಯನ್ನು ಹೊರತರಲು ಯೋಜನೆಯು ಸಿದ್ದಪಡಿಸಲಾಗಿದ್ದು, ಆಗಸ್ಟ್ 17ರೊಳಗೆ ಜಿಲ್ಲಾ ಹಂತದಲ್ಲಿ ಶಾಲೆಗಳ ಸಂಖ್ಯೆಯನ್ನು

ಅಂತಿಮಗೊಳಿಸಿ ಜಿಲ್ಲಾ ಶಾಲಾ ಡೈರಕ್ಟರಿಯನ್ನು ಹೊರತರಲು ಸೂಚಿಸಲು ಸಭೆಯು ಅಭಿಪ್ರಾಯ ಪಟ್ಟಿತು. ರಾಜ್ಯ ಕಛೇರಿಗೆ ಜಿಲ್ಲಾ ಶಾಲಾ ಡೈರಕ್ಟರಿಯನ್ನು 10 ಪ್ರತಿಗಳನ್ನು ದಿ 20-08-09 ರೊಳಗೆ ಕಳುಹಿಸಲು ನಿರ್ದೇಶನ ನೀಡಲು ಸಭೆಯು ಅಭಿಪ್ರಾಯ ಪಟ್ಟಿತು.

- ಎಲ್ಲಾ ಜಿಲ್ಲೆಯ ಶಾಲಾ ಡೈರಕ್ಟರಿಯ ಅಧಾರದ ಮೇಲೆ 2009-10 ನೇ ಸಾಲಿನ ನಮೂನೆಗಳನ್ನು ಮುದ್ರಿಸಿ ವಿತರಿಸಲಾಗುವುದು
- ಈ ಸಾಲಿನ ಶೈಕ್ಷಣಿಕ ಮಾಹಿತಿ ಸಂಗ್ರಹಣಾ ವೇಳಾಪಟ್ಟಿಯನ್ನು ಸಭೆಯಲ್ಲಿ ವಿವರವಾಗಿ ಚರ್ಚಿಸಲಾಯಿತು, ಸದರಿ ವೇಳಾಪಟ್ಟಿಯನ್ನು ಈ ಸಾಲಿನಲ್ಲಿ ಅನುಷ್ಠಾನಗೊಳಿಸಲು ಸಭೆಯು ಅಭಿಪ್ರಾಯ ಪಟ್ಟಿತು.
- ಈ ಸಾಲಿನ ಶೈಕ್ಷಣಿಕ ಮಾಹಿತಿ ಸಂಗ್ರಹಣಾ ನಮೂನೆಗಳನ್ನು ಸರ್ಕಾರಿ, ಅನುದಾನಿತ ಮತ್ತು ಅನುದಾನರಹಿತ ಶಾಲೆಗಳಿಗೆ ಮೂರು ವಿವಿಧ ಬಣ್ಣಗಳಲ್ಲಿ ಮುದ್ರಿಸಿಲು ಸಭೆಯಲ್ಲಿ ವಿವರವಾಗಿ ಚರ್ಚಿಸಲಾಯಿತು, ಈ ಸಾಲಿನಲ್ಲಿ ಅನುಷ್ಠಾನಗೊಳಿಸಲು ಸಭೆಯು ಅಭಿಪ್ರಾಯ ಪಟ್ಟಿತು.
- ಜಿಲ್ಲಾ ಪಂಚಾಯತ್ ಕ್ಷೇತ್ರದ ಮಾಹಿತಿ,ನಗರ ಪ್ರದೇಶದಲ್ಲಿರುವ ಜನವಸತಿ ಪ್ರದೇಶದ ಮಾಹಿತಿ ಪಡೆಯಲು ಸಭೆಯಲ್ಲಿ ವಿವರವಾಗಿ ಚರ್ಚಿಸಲಾಯಿತು, ಈ ಸಾಲಿನಲ್ಲಿ ಮಾಹಿತಿ ಸಂಗ್ರಹಿಸಲು ಸಭೆಯು ಅಭಿಪ್ರಾಯ ಪಟ್ಟಿತು.
- ಶಾಲೆಯು ಯಾವ ಪ್ರದೇಶದಲ್ಲಿರುವ ಮಾಹಿತಿ ಪಡೆಯಲು ಸಭೆಯಲ್ಲಿ ವಿವರವಾಗಿ ಚರ್ಚಿಸಲಾಯಿತು, ಈ ಸಾಲಿನಲ್ಲಿ ಮಾಹಿತಿ ಸಂಗ್ರಹಿಸಲು ಸಭೆಯು ಅಭಿಪ್ರಾಯ ಪಟ್ಟಿತು.
- ಕಳೆದ ಸಾಲಿನಲ್ಲಿ ಶಾಲೆಯ ನಿರ್ವಹಣೆಯ ಮಾಹಿತಿಯನ್ನು 26 ವಿಧಗಳಲ್ಲಿ ಪಡೆಯಲಾಗುತ್ತಿತ್ತು, ಆದರೆ ಈ ಸಾಲಿನಲ್ಲಿ ಮುಖ್ಯವಾಗಿ 7 ವಿಧಗಳಲ್ಲಿ ಕ್ರಮ ಸಂಖ್ಯೆ 18 ರಲ್ಲಿ ಹಾಗೂ ಉಪ ವಿಭಾಗದಲ್ಲಿ ಆಯಾ ನಿರ್ವಹಣೆಯ ವಿಧಗಳ ಅದಾರದ ಮೇಲೆ ಕ್ರಮ ಸಂಖ್ಯೆ 18ಅ ರಲ್ಲಿ ಮಾಹಿತಿ ಸಂಗ್ರಹಿಸಲು ಸಭೆಯು ಅಭಿಪ್ರಾಯ ಪಟ್ಟಿತು.
- ಕ್ರಮ ಸಂಖ್ಯೆ 18 ಆ ರಲ್ಲಿ ಅಲ್ಪ ಸಂಖ್ಯಾತ ಶಾಲೆಯ ಮಾಹಿತಿ, 18 ಇ ರಲ್ಲಿ ಮತೀಯ ಮತ್ತು ಭಾಷಾ ಅಲ್ಪ ಸಂಖ್ಯಾತ ಶಾಲೆಯ ಮಾಹಿತಿಯನ್ನು ಸಂಗ್ರಹಿಸಲು ಸಭೆಯು ಅಭಿಪ್ರಾಯ ಪಟ್ಟಿತು.
- ಕ್ರಮ ಸಂಖ್ಯೆ 20 ಅ ರಲ್ಲಿ ಶಾಲೆಯು ಉನ್ನತೀಕರಿಸಿದ ಮತ್ತು ಯಾವ ವರ್ಷದಲ್ಲಿ ಉನ್ನತೀಕರಿಸಿದ ಮಾಹಿತಿಯನ್ನು ಸಂಗ್ರಹಿಸಲು ಸಭೆಯು ಅಭಿಪ್ರಾಯ ಪಟ್ಟಿತು.
- ಶಾಲೆಯಲ್ಲಿರುವ ಬೋಧನಾ ಮಾಧ್ಯಮಗಳ ಮಾಹಿತಿಯನ್ನು ಸಂಗ್ರಹಿಸಲು ಸಭೆಯು ಅಭಿಪ್ರಾಯ ಪಟ್ಟಿತು.
- ಶಾಲೆಯು ಅನುದಾನಕ್ಕೆ ಒಳಪಟ್ಟ ದಿನಾಂಕ ಮತ್ತು ಪ್ರೌಢಶಾಲೆಗಳಲ್ಲಿ ವಿಭಾಗವಾರು ಅನುದಾನಕ್ಕೆ ಒಳಪಟ್ಟ ವಿಭಾಗಗಳ ಸಂಖ್ಯೆಯ ಮಾಹಿತಿಯನ್ನು ಸಂಗ್ರಹಿಸಲು ಸಭೆಯು ಅಭಿಪ್ರಾಯ ಪಟ್ಟಿತು.
- ಈ ಸಾಲಿನಲ್ಲಿ ಶಾಲೆಯು ಗಡಿನಾಡು, ಕರಾವಳಿ ಕೊಳಚೆ ಪ್ರದೇಶದಲ್ಲಿರುವ ಮಾಹಿತಿ ಸಂಗ್ರಹಿಸಲು ಸಭೆಯು ಅಭಿಪ್ರಾಯ ಪಟ್ಟಿತು.
- ಈ ಸಾಲಿನಲ್ಲಿ ಶಾಲೆಯು ಗುಡ್ಡಗಾಡು ಬುಡಕಟ್ಟು ಪ್ರದೇಶದಲ್ಲಿರುವ ಮಾಹಿತಿ ಸಂಗ್ರಹಿಸಲು ಸಭೆಯು ಅಭಿಪ್ರಾಯ ಪಟ್ಟಿತು.
- ಶಾಲಾ ಕಟ್ಟಡಗಳ ಮಾಹಿತಿಯಲ್ಲಿ ಒಡೆತನ ಮತ್ತು ವಸ್ತು ಸ್ಥಿತಿಯ ಮಾಹಿತಿ ಸಂಗ್ರಹಿಸಲು ಸಭೆಯು ಅಭಿಪ್ರಾಯ ಪಟ್ಟಿತು.
- ಶಾಲಾ ಕಟ್ಟಡಗಳ ಮಾಹಿತಿಯಲ್ಲಿ ಬೋಧನೆಗೆ ಲಭ್ಯವಿರುವ ಹಾಗೂ ಇತರೆ ಕೊಠಡಿಗಳ ಮಾಹಿತಿ ಸದರಿ ಕೊಠಡಿಗಳ ದುರಸ್ತಿಯ ಮಾಹಿತಿ ಸಂಗ್ರಹಿಸಲು ಸಭೆಯು ಅಭಿಪ್ರಾಯ ಪಟ್ಟಿತು.

- ನಿರ್ಮಾಣ ಹಂತದಲ್ಲಿರುವ  ಶಾಲಾ ಕಟ್ಟಡಗಳ ಮಾಹಿತಿ, ಹೆಚ್ಚುವರಿ ಕೊಠಡಿಗಳ ನಿರ್ಮಾಣಕ್ಕೆ ಅವಶ್ಯಕವಾದ ಸ್ಥಳಾವಕಾಶ ಇರುವ ಬಗ್ಗೆ ಮಾಹಿತಿ ಸಂಗ್ರಹಿಸಲು  ಸಭೆಯು ಅಭಿಪ್ರಾಯ ಪಟ್ಟಿತು.
- ಶಾಲಾ ಕಾಂಪೌಡ್ ನಿರ್ಮಾಣ ಮಾಡಲು ಅವಶ್ಯಕವಾದ ಮಾಹಿತಿ ಗ್ರಂಥಾಲಯದಲ್ಲಿರುವ ಪುಸ್ತಕಗಳ ಮಾಹಿತಿ ಸಂಗ್ರಹಿಸಲು  ಸಭೆಯು ಅಭಿಪ್ರಾಯ ಪಟ್ಟಿತು.
- ಕಪ್ಪುಹಲಗೆ ಮಾಹಿತಿ ಸಂಗ್ರಹಿಸುವ ಸಂಬಂಧ ಚರ್ಚಿಸಲಾಯಿತು ಅದರಂತೆ ಶಾಲೆಗಳಲ್ಲಿ ಹಸಿರು ಬೋರ್ಡ್, ಬಿಳಿಯ ಬೋರ್ಡ್, ರೋಲಿಂಗ್ ಬೋರ್ಡ್ ಎಲ್ಲವನ್ನೂ ಬ್ಲಾಕ್ ಬೋರ್ಡ್ ಎಂದು ಪಡಿಗಣಿಸುವ ಸಂಬಂಧ ನಮೂನೆಯಲ್ಲಿ ವಿವರಣೆಯನ್ನು ನೀಡಬೇಕೆಂದು ತೀರ್ಮಾನಿಸಲಾಯಿತು. ಇದರಿಂದ ಶಾಲೆಗಳಲ್ಲಿ ಕಪ್ಪು ಹಲಗೆಗಳಿಲ್ಲದ ಶಾಲೆಗಳ ಮಾಹಿತಿ ಸರಿಯಾಗಿ ಬರುವುದೆಂದು ತೀರ್ಮಾನಿಸಲಾಯಿತು.
- ಗಣಕಯಂತ್ರಗಳ ಸೌಲಭ್ಯಗಳ ಮಾಹಿತಿಯನ್ನು ಹಾಗೂ ಯಾವ ಯೋಜನೆಯಡಿಯಲ್ಲಿ, ಯಾವ ವರ್ಷದಲ್ಲಿ ಅನುಷ್ಠಾನ ಮಾಡಿರುವ ಮಾಹಿತಿಯನ್ನು ಪಡೆಯುವುದು ಸೂಕ್ತವೆಂದು ಸಭೆಯು ಅಭಿಪ್ರಾಯ ಪಟ್ಟಿತು.
- ಶಾಲೆಯಲ್ಲಿ ಶಿಕ್ಷಕರಿಗೆ ಮತ್ತು ಮಕ್ಕಳಿಗೆ ಇರುವ ಪೀಠೋಪಕರಣಗಳ ವಿವರಗಳನ್ನು ಮಾಹಿತಿಯನ್ನು ಪಡೆಯುವುದು ಸೂಕ್ತವೆಂದು ಸಭೆಯು ಅಭಿಪ್ರಾಯ ಪಟ್ಟಿತು.
- ಶಾಲೆಯ ಆವರಣದಲ್ಲಿರುವ ಪೂರ್ವ ಪ್ರಾಥಮಿಕ ಪ್ರಾಥಮಿಕ ಶಾಲೆಗಳ, ಮಕ್ಕಳ ಸಂಖ್ಯೆ, ಶಿಕ್ಷಕರ ಸಂಖ್ಯೆಯ ಮಾಹಿತಿಯನ್ನು ಪಡೆಯುವುದು ಸೂಕ್ತವೆಂದು ಸಭೆಯು ಅಭಿಪ್ರಾಯ ಪಟ್ಟಿತು.
- ಶಾಲೆಯ ಆವರಣ ಅಥವಾ ಪಕ್ಕದಲ್ಲಿರುವ  ಅಂಗನವಾಡಿ ಕೇಂದ್ರದ , ಮಕ್ಕಳ ಸಂಖ್ಯೆ, ಶಿಕ್ಷಕರ ಸಂಖ್ಯೆಯ ಮಾಹಿತಿಯನ್ನು ಪಡೆಯುವುದು ಸೂಕ್ತವೆಂದು ಸಭೆಯು ಅಭಿಪ್ರಾಯ ಪಟ್ಟಿತು.
- ಸನಿವಾಸ ಶಾಲೆಗಳ ಮತ್ತು ಪಾಳಿ ವ್ಯವಸ್ಥೆ ಶಾಲೆಗಳ ಮಾಹಿತಿಗಳನ್ನು ಪಡೆಯುವುದು ಸೂಕ್ತವೆಂದು ಸಭೆಯು ಅಭಿಪ್ರಾಯ ಪಟ್ಟಿತು.
- ಈ ಸಾಲಿನಲ್ಲಿ ಶಾಲೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ, ನಿಯೋಜನೆ ಮೇಲೆ ಕರ್ತವ್ಯ ನಿರ್ವಹಿಸುತ್ತಿರುವ ಶಿಕ್ಷಕರ ಮಾಹಿತಿ ಪಡೆಯುವುದು ಸೂಕ್ತವೆಂದು ಸಭೆಯು ಅಭಿಪ್ರಾಯ ಪಟ್ಟಿತು.
- ಈ ಸಾಲಿನಲ್ಲಿ ಶಾಲೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ವಿವರಗಳನ್ನು ಸಮಗ್ರವಾಗಿ ಪಡೆಯಲು ಅಗತ್ಯವಾದ ಸೂಚನೆಗಳನ್ನು ನೀಡಿ  ಶಿಕ್ಷಕರ ಮಾಹಿತಿ ಪಡೆಯುವುದು ಸೂಕ್ತವೆಂದು ಸಭೆಯು ಅಭಿಪ್ರಾಯ ಪಟ್ಟಿತು.
- ಈ ಸಾಲಿನಲ್ಲಿ ಸಹ ಹೊಸದಾಗಿ ದಾಖಲಾದ ಮಕ್ಕಳು ಮತ್ತು ವರ್ಗಾವಣೆ ಪತ್ರ ಪಡೆದ ಮಾಹಿತಿ,ಪ್ರಸಕ್ತ ಶೈಕ್ಷಣಿಕ ವರ್ಷದಲ್ಲಿ ದಾಖಲಾದ ಒಟ್ಟು ಮಕ್ಕಳ ವಿವರ, ಮಕ್ಕಳ ಹಾಜರಾತಿ ವಿವರ, 2008-09 ನೇ ಸಾಲಿನಲ್ಲಿ ಪ್ರೋತ್ಸಾಯದಾಯಕ ಸೌಲಭ್ಯ ಪಡೆದ ವಿವರ, 2008-09 ನೇ ಸಾಲಿನಲ್ಲಿ ವಾರ್ಷಿಕ ಪರೀಕ್ಷಾ ಪಲಿತಾಂಶಗಳ  ವಿವರ, ವಿಷೇಶ ಅಗತ್ಯವುಳ್ಳ ಮಕ್ಕಳ ವಿವರ , ವಯೋಮಾನವಾರು ವಿವರಗಳ ಮಾಹಿತಿ ಕಳೆದ ಸಾಲಿನಲ್ಲಿ ಮಾಹಿತಿಗಳನ್ನು ಸಂಗ್ರಹಿಸಿದಂತೆ ಪಡೆಯುವುದು ಸೂಕ್ತವೆಂದು ಸಭೆಯು ಅಭಿಪ್ರಾಯ ಪಟ್ಟಿತು.
- 2009-10 ನೇ ಸಾಲಿನಲ್ಲಿ ಪಠ್ಯ ಪುಸ್ತಕಗಳ ವಿತರಣೆಗಾಗಿ ಪ್ರಥಮ , ದ್ವಿತೀಯ ಭಾಷೆ, ತೃತೀಯ ಭಾಷೆ ಮತ್ತು ಮಾಧ್ಯಮವಾರು ವಿವರಗಳ ಮಕ್ಕಳ ವಿವರಗಳ ಮಾಹಿತಿಗಳನ್ನು ಪಡೆಯುವುದು ಸೂಕ್ತವೆಂದು ಸಭೆಯು ಅಭಿಪ್ರಾಯ ಪಟ್ಟಿತು.
- ಈ ಸಾಲಿನಲ್ಲಿ ಪುನರಾವರ್ತಿತ ವಿದ್ಯಾರ್ಥಿಗಳ ವಿವರ –ವರ್ಗವಾರು ಹಾಗೂ ಕಾರಣವಾರು ಮಾಹಿತಿಯನ್ನು ಪಡೆಯುವುದು ಸೂಕ್ತವೆಂದು ಸಭೆಯು ಅಭಿಪ್ರಾಯ ಪಟ್ಟಿತು.

- ಈ ಸಾಲಿನಲ್ಲಿ ಮಧ್ಯಾಹ್ನದ ಉಪಹಾರ ಯೋಜನೆಯ ಮಾಹಿತಿಯಲ್ಲಿ ಪಡೆಯುತ್ತಿರುವ ಬಗ್ಗೆ, ಶಾಲೆಯಲ್ಲಿ ಉಪಹಾರವನ್ನು ಸಿದ್ದಪಡಿಸಿ ನೀಡಲಾಗುತ್ತಿರುವ ಮಾಹಿತಿ, ಬೇರೆ ಶಾಲೆ/ಸಂಸ್ಥೆಯಿಂದ ಉಪಹಾರ ಪಡೆಯುತ್ತಿದ್ದ ಮಾಹಿತಿಗಳನ್ನು ಪಡೆಯುವುದು ಸೂಕ್ತವೆಂದು ಸಭೆಯು ಅಭಿಪ್ರಾಯ ಪಟ್ಟಿತು.
- ಈ ಸಾಲಿನಲ್ಲಿ ಮಧ್ಯಾಹ್ನದ ಉಪಹಾರ ಯೋಜನೆಯ ಮಾಹಿತಿಯನ್ನು ಎಲ್ಲಾ ತಾಲ್ಲೋಕಿನಲ್ಲಿರುವ ಸಹಾಯಕ ನಿರ್ದೇಶಕರು (ಮ.ಉ.ಯೋ) ಸಂಪೂರ್ಣವಾಗಿ ಪರೀಶಿಲನೆ ನಡೆಸಿ ಮಾಹಿತಿಗಳನ್ನು ಸಂಗ್ರಹಿಸಲು ಸಹಕಾರ ನೀಡುವುದು , ಅಲ್ಲದೆ ಮಾಹಿತಿಗಳ ನಿಖರತೆ, ಪರಿಪಕ್ವತೆಯ ಜವಬ್ದಾರಿಯನ್ನು ನಿರ್ವಹಿಸಲು ಸಭೆಯು ನಿರ್ಣಯಿಸಿತು.
- ದಿ 31-03-2010 ಕ್ಕೆ ಸಂಬಂದಿಸಿದಂತೆ ಮಾಹಿತಿಗಳನ್ನು ಸಂಗ್ರಹಿಸಲು ನಮೂನೆಗಳ ಬಗ್ಗೆ ವಿವರವಾಗಿ ಚರ್ಚಿಸಿ ಸದರಿ ನಮೂನೆಗಳ ಅಧಾರದ ಮೇಲೆ ಮಾಹಿತಿ ಸಂಗ್ರಹಿಸಲು ಹಾಗೂ ಶಾಲೆಯ ಆಸ್ತಿಯ ವಿವರಗಳ ಮಾಹಿತಿಯನ್ನು ಪಡೆಯಲು ಸಭೆಯ ನಿರ್ಣಯಿಸಲಾಯಿತು.
- ಈ ಸಾಲಿನಲ್ಲಿ ನಮೂನೆಗಳನ್ನು 3 ಬಣ್ಣಗಳಲ್ಲಿ ಅಂದರೆ ಸರ್ಕಾರಿ,ಅನುದಾನಿತ,ಅನುದಾನರಹಿತ ಶಾಲೆಗಳಿಗೆ ವಿವಿಧ ಬಣ್ಣಗಳಲ್ಲಿ ಮುದ್ರಿಸಲು ಸಭೆಯಲ್ಲಿ ಇದರಿಂದ ಆಗುವ ಉಪಯೋಗವನ್ನು ವಿವರವಾಗಿ ಚರ್ಚಿಸಿ 3 ಬಣ್ಣಗಳಲ್ಲಿ ಮುದ್ರಿಸಲು ಸಭೆಯ ನಿರ್ಣಯಿಸಲಾಯಿತು.
- ಈ ಸಾಲಿನಲ್ಲಿ ನಮೂನೆಗಳ ಮಾಹಿತಿಗಳನ್ನು ಸಂಗ್ರಹಿಸಲು ಹಾಗೂ ಕ್ರೋಡಿಕರಣ ಮಾಡಲು ಸಹಾಯಕವಾಗುವಂತೆ ವೆಬ್ಬ್ ಸೈಟ್ ನಲ್ಲಿ ಸಂಪೂರ್ಣವಾದ ಮಾರ್ಗದರ್ಶನ ನೀಡಲು ಸಹಕಾರಿಯಾಗುವಂತೆ ಮಾರ್ಗದರ್ಶನ ಸೂಚನೆಗಳನ್ನು ಪ್ರಕಟಿಸುವುದು ಹಾಗೂ ಇದಕ್ಕೆ ಸಂಬಂದಿಸಿದಂತೆ ಎಪ್.ಎ.ಕ್ಯೂ ಪ್ರಶ್ನೆಗಳನ್ನು ಯಾವ್ಯದೇ ಶಿಕ್ಷಕರು,ಇಲಾಖಾ ಅದಿಕಾರಿಗಳು ಪ್ರಶ್ನೆಗಳನ್ನು ಕೇಳಿದಾಗ ಉತ್ತರಗಳನ್ನು ವೆಬ್ಬ್ ಸೈಟ್ ನಲ್ಲಿ ಪ್ರಕಟಿಸುವುದು ಆದುದರಿಂದ ಈ ಸಾಲಿನಲ್ಲಿ ನಮೂನೆಗಳನ್ನು ಸಮಗ್ರವಾಗಿ ವಿತರಿಸಿ, ಸಂಪೂರ್ಣ ಮಾಹಿತಿ ನೀಡಿ, ಸಮಗ್ರತೆಯಿಂದ ಪರಿಪಕ್ವತೆಯಿಂದ ಕೂಡಿರುವ ಸಂಗ್ರಹಿಸಲು ಸಭೆಯ ನಿರ್ಣಯಿಸಲಾಯಿತು.
- ಈ ಸಾಲಿನಲ್ಲಿ ನಮೂನೆಗಳ ಮಾಹಿತಿಗಳನ್ನು ಸಂಗ್ರಹಿಸಲು ಹಾಗೂ ಕ್ರೋಡಿಕರಣ ಮಾಡಲು ದಿನಾಂಕ 17-09-09 ರಿಂದ ಸಿ.ಆರ್.ಪಿ ರವರು ಶಾಲೆಗಳಿಗೆ ಭೇಟಿ ನೀಡಿ ಮಾಹಿತಿಗಳನ್ನು ಭರ್ತಿಮಾಡಲು ಸಲಹೆಗಳನ್ನು ನೀಡುವುದು, ಅಲ್ಲದೇ ಮಾಹಿತಿಗಳು ಭರ್ತಿಮಾಡಿದ ನಮೂನೆಗಳನ್ನು ಪರಿಶೀಲಿಸಿ ಶಾಲೆಯಲ್ಲಿರುವ ಮಾಹಿತಿಗಳಿಗೂ ನಮೂನೆಗಳಲ್ಲಿರುವ ಮಾಹಿತಿಗೂ ಹೊಂದಾಣಿಕೆ ಮಾಡಿ ಶೇ100ರಷ್ಟು ಮಾಹಿತಿಗಳು ಸರಿಯಾಗಿವೆ ಎಂದು ಧೃಡೀಕರಿಸಿಕೊಳ್ಳುವುದು. ಈ ರೀತಿ ಶಾಲಾ ಶಿಕ್ಷಕರಿಗೆ ಡೈಸ್ ಸಂಬಂಧ ನೀಡಿದ ತರಬೇತಿಯನ್ನು ಶಿಕ್ಷಕರ ತರಬೇತಿ ಎಂದು ಪರಿಗಣಿಸಿ, 10 ದಿನಗಳ ತರಬೇತಿಯಲ್ಲಿ ಪರಿಗಣಿಸುವುದು ಎಂದು ಸಭೆ ತೀರ್ಮಾನಿಸಿತು.
- ದಿ 03-10-09 ರಿಂದ ನಮೂನೆಗಳ ಡೇಟಾ ಎಂಟ್ರಿ ಮಾಡಲು ಜಿಲ್ಲಾ ಮಟ್ಟ ಅಥವಾ ಬ್ಲಾಕ್ ಮಟ್ಟದಲ್ಲಿ ನೀಡುವುದು, ಕ್ಲಸ್ಟರ್ ವಾರು ನಮೂನೆಗಳನ್ನು ಡೇಟಾ ಎಂಟ್ರಿ ಮಾಡಿದ ನಂತರ ಪ್ರಿಂಟ್ ಗಳನ್ನು ತೆಗೆದು ಶಾಲಾವಾರು ಪ್ರಿಂಟೆಡ್ ಮಾಹಿತಿಗಳನ್ನು ಶಾಲೆಗಳಲ್ಲಿ ಪರಿಶೀಲಿಸಿ ಶೇ100 ರಷ್ಟು ಮಾಹಿತಿಗಳನ್ನು ಧೃಡಿಕರಿಸಿಕೊಳ್ಳುವುದು.
- ದಿ25-10-09 ರೊಳಗೆ ಎಲ್ಲಾ ಜಿಲ್ಲೆಯ ನಮೂನೆಗಳ ಮಾಹಿತಿಗಳನ್ನು ಡೇಟಾ ಎಂಟ್ರಿ ಮಾಡುವುದು, ಬ್ಲಾಕ್ ಅಧಿಕಾರಿಗಳು ಶೇ 25 ರಷ್ಟು ನಮೂನೆಗಳನ್ನು ಪರಿಶೀಲನೆ ನಡೆಸುವುದು ಮತ್ತು ಮಾಹಿತಿಗಳನ್ನು ಧೃಡೀಕರಿಸುವುದು.
- ದಿ 25-09-09 ರಿಂದ 05-11-09 ರೊಳಗೆ ಜಿಲ್ಲಾ ಮಟ್ಟದಲ್ಲಿ ವಿವಿಧ ವರದಿಗಳನ್ನು ತಯಾರಿಸಿ ಮಾಹಿತಿಗಳನ್ನು ಧೃಡಿಕರಿಸಿಕೊಳ್ಳುವುದು. ಶೇ 10 ರಷ್ಟು ನಮೂನೆಗಳನ್ನು ಪರಿಶೀಲನೆ ನಡೆಸುವುದು ಮತ್ತು ಮಾಹಿತಿಗಳನ್ನು ಧೃಡೀಕರಿಸುವುದು.
- ದಿ 06-11-09 ರಂದು ರಾಜ್ಯ ಕಛೇರಿಗೆ ಮಾಹಿತಿಗಳನ್ನು ಧೃಡಿಕರಣದೊಂದಿಗೆ ಸಲ್ಲಿಸುವುದು.

- ಜಿಲ್ಲಾ ಮಟ್ಟದಲ್ಲಿ ತಾಲ್ಲಾಕು ವಾರು ಶೈಕ್ಷಣಿಕ ಅಬಿವೃದ್ಧಿ ಸೂಚ್ಯಾಂಕ ವನ್ನು ತಯಾರಿಸುವದು ದಿ 15-11-09 ರೊಳಗೆ ರಾಜ್ಯ ಕಛೇರಿಗೆ ವರದಿ ಸಲ್ಲಿಸುವುದು.
- ಈ ಸಾಲಿನಲ್ಲಿ ಶೇ 5ರಷ್ಟು ಮಾಹಿತಿಗಳನ್ನು ಪರೀಶಿಲಿಸಲು ಹೊರಗಡೆಯಿಂದ ನಡೆಸುವ ಕಾರ್ಯವನ್ನು ಸೆಪ್ಟಂಬರ್ ಮಾಹೆಯಲ್ಲಿ ಪ್ರಾರಂಬಿಸಿ ನವೆಂಬರ್ ಮಾಹೆಯಲ್ಲಿ ಸಂಪೂರ್ಣ ಮಾಡಲು ಸಭೆಯು ನಿರ್ಣಯಿಸಲಾಯಿತು.
- ರಾಜ್ಯ ಮಟ್ಟದಲ್ಲಿ ಜಿಲ್ಲಾವಾರು ಶೈಕ್ಷಣಿಕ ಅಬಿವೃದ್ಧಿ ಸೂಚ್ಯಾಂಕ ವನ್ನು ತಯಾರಿಸುವದು, ಮತ್ತು ಕೇಂದ್ರ ಸರ್ಕಾರಕ್ಕೆ ವರದಿಯನ್ನು ದಿ 30-11-09 ರೊಳಗೆ ಸಲ್ಲಿಸುವಂತೆ ಕ್ರಮ ಕೈಗೊಳ್ಳಲು ಸಭೆಯು ನಿರ್ಣಯಿಸಲಾಯಿತು.
- ಮೇಲ್ಕಂಡ ಎಲ್ಲಾ ಕಾರ್ಯಗಳನ್ನು ನಿಗದಿತ ದಿನಾಂಕಗಳಲ್ಲಿ ನಿರ್ವಹಿಸಲು ಎಲ್ಲಾ ಉಪನಿರ್ದೇಶಕರಿಗೆ ಹಾಗೂ ಕ್ಷೇತ್ರ ಶಿಕ್ಷಣಾಧಿಕಾರಿಗಳಗೆ ಸಭಾ ನಡುವಳಿಗಳನ್ನು ನೀಡಿ ನಿಗದಿತ ಸೂಚನೆಗಳನ್ನು ನೀಡಲು ಸಭೆಯು ನಿರ್ಣಯಿಸಿ ಸಭೆಯು ಮುಕ್ತಾಯ ಮಾಡಲಾಯಿತು.

ಸಹ ನಿರ್ದೇಶಕರು (ಆಡಳಿತ)
ಸರ್ವಶಿಕ್ಷಣ ಅಭಿಯಾನ